# ಪರಿಪ್ರಶ್ನೆ

ಪ್ರಶ್ನಿಸುವುದು ಮನುಷ್ಯ ಜೀವಾಳದ ಮುಖ್ಯಧಾತು. ನಮ್ಮ ಬದುಕಿನಲ್ಲಿ ಹಲವು ಬಾರಿ ಪ್ರಶ್ನೆಗಳು ಕಾಣಿಸಿಕೊಳ್ಳುತ್ತವೆ. ನಮ್ಮಲ್ಲೇ ಅವುಗಳನ್ನು ಹುಡುಕಿಕೊಳ್ಳುವ ಪ್ರಯತ್ನವನ್ನು ಮಾಡುತ್ತೇವೆ. ಒಂದು ಪಕ್ಷ ಉತ್ತರಗಳು ಸಿಗದೆ ಇರುವಾಗ ಬಲ್ಲಿದರನ್ನು ಹುಡುಕಿಕೊಂಡು ಹೋಗುತ್ತೇವೆ. ನಮ್ಮ ಸಂಸ್ಕೃತಿಯಲ್ಲಿ ಮಾತ್ರವಲ್ಲ, ವಿಶ್ವಸಂಸ್ಕೃತಿಯಲ್ಲೂ ಪ್ರಶ್ನೆಗಳ ಸರಮಾಲೆ ಉಂಟು. ಒಂದೊಂದು ವಯೋಮಾನದಲ್ಲಿ ಒಂದೊಂದು ಬಗೆಯ ಪ್ರಶ್ನೆಗಳು ಕಾಣಿಸಿಕೊಳ್ಳುತ್ತವೆ. ಮಗು ಕೇಳುವ ಪ್ರಶ್ನೆ ಬೇರೆ; ಅದೇ ಮಗು ಹುಡುಗನಾದಾಗ ಕೇಳುವ ಪ್ರಶ್ನೆಯೇ ಬೇರೆ. ಇನ್ನು ಅವನು ತಾರುಣ್ಯಕ್ಕೆ ಬಂದಾಗ, ತಿಳಿದವರ ಬಳಿ ತಿಳಿದು ತಿಳಿಯಾಗುತ್ತಾನೆ. ಒಂದು ಪಕ್ಷ ಅಂಥವರು ಸಿಗದೆ ಹೋದಾಗ ಬಳಲುವುದೂ ಉಂಟು. ಮನುಷ್ಯನ ಮೂಲಸ್ವಭಾವವೇ ‘ಪ್ರಶ್ನಲೋಕ’ವೆಂದರೆ ತಪ್ಪಲ್ಲ. ಬುದ್ಧ, ಮಹಾವೀರ, ಬಸವಣ್ಣ, ಗಾಂಧೀಜಿ, ಅಂಬೇಡ್ಕರ್, ತಿಲಕ್, ಪಟೇಲ್, ಸ್ವಾಮಿ ವಿವೇಕಾನಂದ ಮುಂತಾದವರು ಪ್ರಶ್ನೆಗಳ ಬೆನ್ನನ್ನು ಹತ್ತಿದವರೇ. ಅವರು ಕೇಳಿದ ಪ್ರಶ್ನೆಗಳು ಗಹನವಾದುವೆಂಬುದು ಸರಿಯೇ ಸರಿ. ಬುದ್ಧ ಭಗವಂತನು ಆನಂದ ಕೇಳಿದ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ನೀಡಿದ್ದು ಲೋಕಪ್ರಸಿದ್ಧಿ. ಅದೇ ರೀತಿ ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣ ಪರಮಹಂಸರಿಗೆ ಪ್ರಶ್ನೆಗಳ ಸರಮಾಲೆ ಎಸೆದದ್ದುಂಟು. ಅವೆಲ್ಲಕ್ಕೂ ಭಗವಾನ್ ರಾಮಕೃಷ್ಣರು ಬೇರೆಬೇರೆ ರೀತಿಗಳಲ್ಲಿ ವಿವೇಕಾನಂದರಿಗೆ ಅನುಭವ ಮಾಡಿಕೊಟ್ಟರು.

ಶ್ರೀಮದ್ ಭಗವದ್ಗೀತೆಯು ಪ್ರಶ್ನೆ ಮತ್ತು ಉತ್ತರಗಳ ಸಂಹಿತೆಯಾಗಿದೆ. ಅರ್ಜುನನ ಪ್ರಶ್ನೆಗಳಿಗೆ ಶ್ರೀಕೃಷ್ಣ ಉತ್ತರಗಳನ್ನು ನೀಡುತ್ತಾ ಹೋಗುತ್ತಾನೆ. ಆಚಾರ್ಯ ಶಂಕರರು ಪ್ರಧಾನವಾಗಿ ‘ಜ್ಞಾನ’ದ ಉಪಾಸಕರು. ಗೀತೆಯ ‘ಜ್ಞಾನಯೋಗ’ದಲ್ಲಿ ಬರುವ ಒಂದು ಮಾತು ಇಂದಿಗೂ ಬಹಳ ಮುಖ್ಯವೆಂದೇ ನನ್ನ ಭಾವನೆ.

ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ
ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಃ ತತ್ತ್ವದರ್ಶಿನಃ !4–34!

‘ಆಚಾರ್ಯರ ಬಳಿ ಹೋಗಬೇಕು. ದೀರ್ಘದಂಡ ನಮಸ್ಕಾರ ಮಾಡಬೇಕು. ಪ್ರಶ್ನೆಗಳನ್ನು ಹಾಕಿ, ಗುರು ಶುಶ್ರೂಷೆ ಮಾಡುತ್ತ ಆತ್ಮಜ್ಞಾನದ ಸಾಧನಗಳು ಏನೆಂಬುದನ್ನು ತಿಳಿದುಕೊಳ್ಳಬೇಕು. ತತ್ತ್ವದರ್ಶಿಗಳಾದ ಜ್ಞಾನಿಗಳು ಜ್ಞಾನವೇನೆಂಬುದನ್ನು ಆಗ ತಿಳಿಸಿಕೊಡುತ್ತಾರೆ’ ಹೀಗೆಂದು ಕೃಷ್ಣ ಹೇಳುತ್ತ ‘ಪರಿಪ್ರಶ್ನೇನ’ ಎಂಬ ಮಾತನ್ನು ಹೇಳುತ್ತಾನೆ. ಈ ಲೋಕದ ಗತಿ ಇರುವುದೇ ಪ್ರಶ್ನೆಗಳ ಮೂಲಕ ಎಂಬುದನ್ನು ಅವನು ನಮಗೆ ಮನವರಿಕೆ ಮಾಡಿಕೊಡುತ್ತಿದ್ದಾನೆ. ಇಂಥ ಪ್ರಶ್ನೆಗಳ ಪ್ರಪಂಚ ಕೇವಲ ಭಾರತದಲ್ಲಿ ಮಾತ್ರವೇ ಇರಲಿಲ್ಲ. ಗ್ರೀಕ್ ದೇಶದ ಸಾಕ್ರೇಟಿಸ್ ಮಹಾಶಯ ಜನಗಳ ನಡುವೆ ಕುಳಿತು ಪ್ರಶ್ನೆಗಳನ್ನು ಕೇಳುತ್ತ, ಉತ್ತರಗಳನ್ನು ಪಡೆಯುತ್ತಿದ್ದುದು ಪ್ರಸಿದ್ಧವಾಗಿದೆ. ನಮ್ಮಲ್ಲೊಂದು ಅಪಕಲ್ಪನೆ ಉಂಟು. ಪೂರ್ವಿಕರು ಪ್ರಶ್ನೆಗಳಿಗೆ ಅವಕಾಶ ನೀಡುತ್ತಿರಲಿಲ್ಲವೆಂದೂ ಅಂಥ ಪ್ರಶ್ನೆಗಳನ್ನು ಹಾಕುವುದಕ್ಕೆ ಕಿರಿಯರಿಗೆ ಸಾಧ್ಯವಿರಲಿಲ್ಲವೆಂದೂ ಹೇಳುತ್ತಿರುತ್ತಾರೆ. ಹದಿನೆಂಟು ಉಪನಿಷತ್ತುಗಳಲ್ಲಿ ‘ಕೇನೋಪನಿಷತ್ತು’ ಒಂದಷ್ಟೆ. ಇದು ಷಟ್‌ಪ್ರಶ್ನೋಪನಿಷತ್ತೆಂದು ಹೆಸರು ಪಡೆದಿದೆ. ಬಲು ಮುಖ್ಯವಾದ ಆರು ಪ್ರಶ್ನೆಗಳು ಇಲ್ಲುಂಟು. ಅವುಗಳಲ್ಲಿ ಒಂದೊಂದಕ್ಕೂ ಉತ್ತರಗಳು ಅಲ್ಲಿವೆ. ಆಚಾರ್ಯನು ಪ್ರಶ್ನೆಗಳನ್ನು ಆಹ್ವಾನಿಸುತ್ತಿದ್ದುದುಂಟು. ಆ ಪ್ರಶ್ನೆಗಳು ಈ ಲೋಕದ ಪ್ರಶ್ನೆಗಳಾಗುತ್ತಿದುದೂ ಉಂಟು; ಪರಮಾರ್ಥಕ್ಕೆ ಸಂಬಂಧಿಸಿದ ಪ್ರಶ್ನೆಗಳಾಗುತ್ತಿದುದೂ ಉಂಟು. ಜಪಾನಿನ ‘ಝೆನ್’ ಕಥೆಗಳು ಪ್ರಶ್ನೆ–ಉತ್ತರಗಳ ಸಮುಚ್ಚಯ ತತ್ತ್ವಗಳಾಗಿರುವುದನ್ನು ಜಿಜ್ಞಾಸುಗಳು ಗಮನಿಸುವುದು ಅವಶ್ಯ!

ಶಿಷ್ಯನು ಗುರುವಿನ ಚಿತ್ತಾಪಹಾರವಾಗಬೇಕಾದರೆ, ಅವನು ಅಸಾಧಾರಣ ನೆಲೆಯನ್ನು ಪಡೆದಿರಬೇಕು. ಶಿಷ್ಯನಲ್ಲಿ ಅಂತಃಸ್ಫುರಣೆಗೆ ಅವಕಾಶ ನೀಡುವುದೇ ಪ್ರಶ್ನೆಗಳ ತೀವ್ರತೆಯ ಮೇಲೆ. ನಮ್ಮಲ್ಲಿ ‘ಇನ್‌ಟ್ಯೂಷನ್’ ಮತ್ತು ‘ಇಂಟಲೆಕ್ಚುಯಲ್’ ಎಂಬೆರಡು ಪರಿಕಲ್ಪನೆಗಳು ಉಂಟಷ್ಟೆ? ಪ್ರಶ್ನೆಗಳು ಹುಟ್ಟುವುದು ಹೆಚ್ಚಾಗಿ ಇಂಟಲೆಕ್ಚುಯಲ್ ಮೂಲಕವೇ. ಅದು ಪ್ರಶ್ನೆಗಳನ್ನು ಪ್ರಚೋದಿಸುತ್ತದೆ. ಇದು ಪರಿಣತಗೊಂಡಾಗ ‘ಇನ್‌ಟ್ಯೂಷನ್’ ಮೇಲೆದ್ದು ನಿಲ್ಲುತ್ತದೆ. ಅಲ್ಲಿ ಪ್ರಶ್ನೆಗಳು ಪ್ರಯೋಗ ಮತ್ತು ಅನುಭವಗಳ ಮೂಲಕ ನಮ್ಮ ನಮ್ಮ ಸಂದೇಹಗಳು ನಿವಾರಣೆಗೊಳ್ಳಲು ಸಾಧ್ಯವಾಗುತ್ತದೆ. ಮುಗ್ಧಮಗು ಕೇಳುವ ಪ್ರಶ್ನೆಯಲ್ಲಿ ಲೋಕದ ‘ಬೆರಗು’ ತುಂಬಿರುತ್ತದೆ. ಅದೇ ಹುಡುಗ ಕೇಳುವ ಪ್ರಶ್ನೆಯಲ್ಲಿ ಕುತೂಹಲ ತುಂಬಿರುತ್ತದೆ. ಅವನೇ ಯುವಕನಾದಾಗ ಜಿಜ್ಞಾಸೆಯ ಮೂಲಕ ಪ್ರಶ್ನೆಗಳ ಪ್ರಪಂಚಕ್ಕೆ ತೆರಳುತ್ತಾನೆ. ಇವೆಲ್ಲವೂ ಪ್ರತಿಯೊಬ್ಬ ಮನುಷ್ಯ ಜಗತ್ತಿನ ಪ್ರಶ್ನಲೋಕವೇ. ಈ ಪ್ರಶ್ನೆಗಳಲ್ಲಿ ಅನ್ವೇಷಣೆಯೂ ಉಂಟು. ನಚಿಕೇತ, ಸತ್ಯಕಾಮ ಇಂಥ ಪ್ರಶ್ನೆಲೋಕದ ಪ್ರತಿಮೆಗಳೆಂಬುದನ್ನು ನಾವು ಮರೆಯುವಂತಿಲ್ಲ. ಭಾರತದ ಋಷಿಸಂಪ್ರದಾಯ, ಗ್ರೀಕರ ಮುನಿಸಂಪ್ರದಾಯ, ಜಪಾನಿನ ಬೌದ್ಧ ಸಂಪ್ರದಾಯಗಳೆಲ್ಲವೂ ‘ಪರಿಪ್ರಶ್ನ’ದ ಲೋಕಸಂಹಿತೆಯೆಂಬುದನ್ನು ನಾವು ಗಮನಿಸಬೇಕು! ಮನುಷ್ಯನು ಊರ್ಧ್ವಗತಿ ಸಂಪನ್ನ, ಅರ್ಥಾತ್ ತಿಳಿಯಲು ಊರ್ಧ್ವಗಮನ ಅವಶ್ಯವೆಂಬುದನ್ನು ಎಲ್ಲರೂ ಒಪ್ಪುತ್ತಾರೆ!

ಸಮಾಜ ಎಚ್ಚರಗೊಳ್ಳಬೇಕಾದರೆ ಪರಿಪ್ರಶ್ನೆಗಳ ದೀಪಗಳನ್ನು ಹಿಡಿದು ನಿಲ್ಲಬೇಕು. ಅದು ಅಶನ–ವಸನಗಳಷ್ಟೇ ಪ್ರಮುಖವಾದುದು. ಗುರು–ಶಿಷ್ಯ, ತಂದೆ–ಮಗ, ತಾಯಿ–ಮಗಳು ಇವರೆಲ್ಲರೂ ಪರಿಪ್ರಶ್ನೆಗಳ ಬುತ್ತಿಯ ಮೂಲಕ ಸಾಗಬೇಕು. ವಿವೇಕಾನಂದ, ಗಾಂಧೀಜಿ, ಅಂಬೇಡ್ಕರ್ ‘ಪರಿಪ್ರಶ್ನೆ’ ಮೂಲಕ ಬೆಳೆದವರು. ‘ಪರಿಪ್ರಶ್ನೇನ ಸೇವಯಾ’ ಎಂಬ ಮಾತು ಅರ್ಥಪೂರ್ಣವಾಗುವುದು ಪ್ರಶ್ನೆಗಳ ಮೂಲಕವೆಂಬುದನ್ನು ನಾವು ಮರೆಯಕೂಡದು. ಪ್ರತಿಕಾಲಕ್ಕೂ ‘ಪರಿಪ್ರಶ್ನ’ಗಳ ಮೂಲಕವೇ ನಮ್ಮನ್ನು ನಾವು ಎತ್ತರಿಸಿಕೊಳ್ಳುತ್ತಿರಬೇಕು. ಅದಕ್ಕಾಗಿ ನಾವು ಪರಿಪ್ರಶ್ನೆಗಳ ಧಾತ್ರಗಳಾಗುವುದು ಅವಶ್ಯ!

■ ಪುರಂಜೀವಿ

## ಮಾತೇ ಮುತ್ತು

- ರಾಷ್ಟ್ರೀಯ ಭಾವೈಕ್ಯತೆಯನ್ನು ಇಟ್ಟಿಗೆ–ಗಾರೆಗಳಿಂದ ಕಟ್ಟಲಾಗುವುದಿಲ್ಲ. ಅದು ವ್ಯಕ್ತಿಯ ಅಂತರಾಳದಿಂದ ಉದ್ಭವಿಸಬೇಕು.

  –ಎಸ್. ರಾಧಾಕೃಷ್ಣನ್

- ವಿವೇಕವೆಂದರೆ ಬಿಡಿಸಿ ನೋಡುವುದು, ವಿಶ್ಲೇಷಿಸುವುದು, ತೂಗುವುದು, ಅಳೆಯುವುದು.

  –ಗೋಪಾಲಕೃಷ್ಣ ಅಡಿಗ

- ಸತ್ಯವನ್ನು ಹೇಳುವವನು, ಸ್ವಾರ್ಥವನ್ನು ಗೆದ್ದವನು ನಿಜವಾದ ಸುಖಿ.

  –ಬುದ್ಧ

- ಬಹಳಷ್ಟು ಜನರಿಗೆ ಸ್ವಾತಂತ್ರ್ಯ ಬೇಕಿಲ್ಲ. ಏಕೆಂದರೆ ಸ್ವಾತಂತ್ರ್ಯದ ಜತೆಗೆ ಜವಾಬ್ದಾರಿಯು ಇರುತ್ತದೆ. ಬಹಳಷ್ಟು ಜನ ಜವಾಬ್ದಾರಿಯ ಬಗ್ಗೆ ಭಯ ಹೊಂದಿದ್ದಾರೆ.

  –ಸಿಗ್ಮಂಡ್ ಫ್ರಾಯ್ಡ್

- ಸಾಲ, ಗಾಯ, ಬೆಂಕಿ ಮತ್ತು ಚಿಂತೆಯನ್ನು ಸಣ್ಣದೆಂದು ಉಪೇಕ್ಷಿಸಬಾರದು. ಇವು ಮಿತಿ ಮೀರಿ ಬೆಳೆಯುವ ಸಾಮರ್ಥ್ಯವನ್ನು ಹೊಂದಿರುತ್ತವೆ.

  –ಮಹಾವೀರ

- ಧರ್ಮ ಎನ್ನುವುದು ಲೋಕದ ಹಿತಕ್ಕಾಗಿಯೇ ಹೊರತು ಲೋಕ ಧರ್ಮದ ಹಿತಕ್ಕಾಗಿ ಅಲ್ಲ.

  –ಡಿ.ವಿ.ಜಿ.

- ಪ್ರಕೃತಿ ಮತ್ತು ಪರಿಸರದ ಬಗ್ಗೆ ನನಗೆ ಚಿಕ್ಕಂದಿನಿಂದಲೂ ಇರುವ ಕುತೂಹಲಕ್ಕೆ ಮುಖ್ಯ ಕಾರಣ ನಮ್ಮ ತಂದೆಯವರು.

  –ಕೆ.ಪಿ. ಪೂರ್ಣಚಂದ್ರ ತೇಜಸ್ವಿ

- ಶಿಕ್ಷಣ ಪ್ರತಿ ವ್ಯಕ್ತಿಯಲ್ಲಿ ಪರಿಪೂರ್ಣತೆಯನ್ನು ತರಬೇಕು. ಜೀವನವನ್ನು ಮುನ್ನಡೆಸುವ ಸಾಮರ್ಥ್ಯವನ್ನು ನೀಡಬೇಕು.

  –ಜಿಡ್ಡು ಕೃಷ್ಣಮೂರ್ತಿ